ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 5, MAR-APR 2021, 143-147
©*IIMRD*, Mysuru

IIMRD JOURNALS

www.iimrd.com

# ಹಕ್ಕಿ ಪಿಕ್ಕಿ ಬುಡಕಟ್ಟು ಸಮುದಾಯದ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆ

ಡಾ. ಶ್ರೀನಿವಾಸ್ ವಿ[1] ಮತ್ತು ಸಿದ್ದಯ್ಯ[2]

**ಪೀಠಿಕೆ**

ಹಕ್ಕಿ–ಪಿಕ್ಕಿ ಬುಡಕಟ್ಟು ಸಮುದಾಯದವರು ಮೈಸೂರು ಜಿಲ್ಲೆಯಲ್ಲಿ ನೆಲೆಸಿರುವ ಪ್ರಮುಖ ಬುಡಕಟ್ಟು ಸಮುದಾಯಗಳಲ್ಲಿ ಒಂದಾಗಿದೆ. ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯದವರನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಇವರು ತಮ್ಮನ್ನು ತಾವು ರಾಜಪಾರದ್ದಿ ಎಂಬುದಾಗಿ ಕರೆದುಕೊಳ್ಳುತ್ತಾರೆ. ಪ್ರಸ್ತುತ ಇವರು ಮೈಸೂರು, ಕೋಲಾರ, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಇವರು ಹಿಂದಿನ ಕಾಲದಲ್ಲಿ ಊರ ಹೊರವಲಯದಲ್ಲಿ ಬಿಡಾರ (ಡೇರೆ) ಹಾಕಿಕೊಂಡು ತಾತ್ಕಾಲಿಕ ಅವಧಿಗಾಗಿ ವಾಸಮಾಡುತ್ತಿದ್ದರು. ಈಗ ಅವರು ಒಂದೇ ಕಡೆಯಲ್ಲಿ ಸ್ಥಿರವಾಗಿ ನೆಲೆಗೊಳ್ಳುತ್ತಿರುವುದರಿಂದ ಈ ಡೇರೆಗಳ ಬದಲಾಗಿ ಗುಡಿಸಲು ಇಟ್ಟಿಗೆ, ಕಲ್ಲು ಮಣ್ಣಿನ ಮನೆಗಳನ್ನು ಕಟ್ಟಿಕೊಂಡು ಬದುಕುತ್ತಿದ್ದಾರೆ. ಅದರಲ್ಲೂ ಪಕ್ಷಿರಾಜಪುರದಲ್ಲಿ ಹಕ್ಕಿಪಿಕ್ಕಿ ಸಮುದಾಯದ ಮನೆಗಳನ್ನು ನೋಡಿದರೆ ಒಂದು ಕ್ಷಣ ದಂಗಾಗುವುದು ಖಂಡಿತ ಏಕೆಂದರೆ ಬಹುತೇಕ ಮನೆಗಳು ಆಧುನಿಕ ಸೌಲಭ್ಯಗಳಿಂದ ಕೂಡಿದೆ. ಆದರೆ ಎಲ್ಲಾ ಪ್ರದೇಶಗಳಲ್ಲಿಯೂ ಕೂಡ ಇದೇ ಪರಿಸ್ಥಿತಿಯಿಲ್ಲ.

ಈ ಬುಡಕಟ್ಟು ಸಮುದಾಯದವರ ಉಡುಗೆ ತೊಡುಗೆ ವಿಶಿಷ್ಟವಾದುದು. ಸಮುದಾಯದ ಹೆಂಗಸರು ಸೀರೆ ಮತ್ತು ರವಿಕೆ ತೊಟ್ಟರೆ, ಗಂಡಸರು ಪಂಚೆ ಮತ್ತು ಅಂಗಿಗಳನ್ನು ಹಾಕಿಕೊಳ್ಳುತ್ತಾರೆ. ದೆಹಲಿ, ಬಾಂಬೆ, ಗೋವಾ ಮುಂತಾದ ದೊಡ್ಡ ನಗರಗಳಿಗೆ ವ್ಯಾಪಾರಕ್ಕಾಗಿ ಹೋಗುವಾಗ ಬಣ್ಣಬಣ್ಣದ ಅಂಗಿ, ಲುಂಗಿ, ಟೀ ಶರ್ಟು, ಶರ್ಟು, ಪ್ಯಾಂಟು ಮುಂತಾದವುಗಳನ್ನು ಧರಿಸುತ್ತಾರೆ. ಗಂಡಸರು ಧರಿಸುವ ಆಭರಣಗಳಲ್ಲಿ ಕಿವಿಗೆ ಹಂತಿ ಎಂಬ ಓಲೆ ಹಾಗೂ ಕೈಬೆರಳಿಗೆ ಅಂಗುಚಿ ಎಂಬ ಉಂಗುರ ಸೇರಿಕೊಂಡಿವೆ. ಯುವಕರು ಕೊರಳಿಗೆ ಹವಳದ ಸರ, ಹುಲಿ ಉಗುರು ಧರಿಸುತ್ತಿದ್ದಾರೆ. ಹೆಂಗಸರು ಕೊರಳಿಗೆ ಸರ ಧರಿಸುವುದುಂಟು. ಇದಕ್ಕೆ ಅವರು **'ಕಾಲೆಪ್ವಾಟು'** ಎಂದು ಕರೆಯತ್ತಾರೆ. ಇದು ಗಂಡು ಹೆಣ್ಣಿಗೆ ಮದುವೆಯ ಸಂದರ್ಭದಲ್ಲಿ ಕಟ್ಟಿದ ಬಂಧವಾಗಿದೆ.

---

[1] *ಇತಿಹಾಸ ಅಧ್ಯಯನ ವಿಭಾಗ, ಮೈಸೂರು ವಿವಿ, ಮೈಸೂರು.*

[2] *ಇತಿಹಾಸ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ, ಮಂಗಳೂರು.*

ಹಕ್ಕಿಪಿಕ್ಕಿ ಸಮುದಾಯದವರು ಕೂಡ ಇತರ ಬುಡಕಟ್ಟು ಸಮುದಾಯಗಳಂತೆ ಮಾಂಸಾಹಾರಿಗಳು. ಇವರ ಮುಖ್ಯ ಆಹಾರ ಅನ್ನ, ರಾಗಿ, ಗೋಧಿ ಮತ್ತು ಜೋಳದ ಜೊತೆಗೆ ವಿವಿಧ ರೀತಿಯ ಕಾಳುಗಳನ್ನು ಬಳಸುತ್ತಾರೆ. ಇದರೊಂದಿಗೆ ಗೆಡ್ಡೆ–ಗೆಣಸುಗಳನ್ನು ಸಹ ಸೇವಿಸುತ್ತಿದ್ದರು. ಮಧ್ಯಪಾನ–ಧೂಮಪಾನ ಈ ಸಮುದಾಯದಲ್ಲಿ ಸಾಮಾನ್ಯವಾಗಿದೆ. ಹಬ್ಬ ಹರಿದಿನಗಳಲ್ಲಿ ಸಿಹಿ–ತಿನಿಸುಗಳನ್ನು ಮಾಡುತ್ತಾರೆ.

ಬುಡಕಟ್ಟಿನ ಜನರಲ್ಲಿ ಬಂಧುತ್ವ ವ್ಯವಸ್ಥೆ ವಿಶಿಷ್ಟವಾಗಿರುತ್ತದೆ. ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಇಲ್ಲಿದ್ದು, ಎಲ್ಲದಕ್ಕೂ ಹೆಣ್ಣೇ ಕೇಂದ್ರಬಿಂದುವಾಗಿರುತ್ತಾಳೆ. ಹಕ್ಕಿಪಿಕ್ಕಿಗಳಲ್ಲಿ 'ಅಳಿಯಸಂತಾನ'ಪದ್ಧತಿ ಇಲ್ಲದಿದ್ದರೂ ಮಾತೃಪ್ರಧಾನ ಸಂಸ್ಕೃತಿಯ ಬೇರುಗಳು ಇನ್ನೂ ಜೀವಂತವಾಗಿಯೇ ಉಸಿರಾಡುತ್ತಿವೆ. ರಕ್ತ ಸಂಬಂಧದ ಮೂಲಕ ಇವರಲ್ಲಿ ಬಂಧುತ್ವ ನಿರ್ಣಯವಾಗುತ್ತದೆ. ತಾಯಿ ಮತ್ತು ತಂದೆಯ ಕಡೆಯಿಂದ ಸಂಬಂಧಗಳು ಉಂಟಾದರೂ ತಾಯಿಯ ಕಡೆಯಿಂದಲೇ ಹೆಚ್ಚಿನ ಸಂಬಂಧಗಳು ಏರ್ಪಡುತ್ತವೆ.

ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯದಲ್ಲಿ ವಿವಾಹದ ಬಗೆಗೆ ಕಟ್ಟುನಿಟ್ಟಿನ ನಿಯಮಗಳಿಲ್ಲ. ಹಕ್ಕಿಪಿಕ್ಕಿಯರಲ್ಲಿ ಸಗೋತ್ರ ವಿವಾಹ ನಿಷಿದ್ಧವಾಗಿದೆ. 'ಜಾತ್'ಮತ್ತು'ಭುಕ್ಯಾ'ಗಳೆಂಬ ಪ್ರಮುಖ ಗೋತ್ರಗಳಿದ್ದು, ಇವುಗಳ ನಡುವೆ ರಕ್ತಸಂಬಂಧ ಏರ್ಪಡುತ್ತದೆ. ಸಾಮಾನ್ಯವಾಗಿ ಹಕ್ಕಿಪಿಕ್ಕಿಯರಲ್ಲಿ 'ಬಾಲ್ಯವಿವಾಹ'ಪದ್ಧತಿ ರೂಢಿಯಲ್ಲಿದೆ. ವಧು ದಕ್ಷಿಣೆ ಪದ್ಧತಿ ಅವರಲ್ಲಿದೆ. ಹಕ್ಕಿಪಿಕ್ಕಿಯರಲ್ಲಿ ಮದುವೆಯು 'ಸಗಾಯಿ' ಅಂದರೆ ನಿಶ್ಚಯಶಾಸ್ತ್ರ' ಮತ್ತು 'ವಾಯ್' ಅಂದರೆ 'ಮದುವೆಶಾಸ್ತ್ರ' ಎಂದು ಎರಡು ಹಂತಗಳಲ್ಲಿ ನಡೆಯುತ್ತದೆ. ವಯಸ್ಸಿಗೆ ಬಂದ ಗಂಡು ಹೆಣ್ಣು ಓಡಿ ಹೋಗಿ ಕೆಲವು ದಿನಗಳಾದ ಮೇಲೆ ಹಟ್ಟಿಯನ್ನು ಸೇರಿದರೆ ಕುಲಸ್ಥರೆಲ್ಲರೂ ಸೇರಿ ಅವರಿಗೆ ದಂಡ ವಿಧಿಸುತ್ತಾರೆ. ಇಂತಹವರನ್ನು ಸಮಾಜದಲ್ಲಿ ಕೀಳಾಗಿ ಕಾಣಲಾಗುತ್ತದೆ. ಅವರ ದೋಷವನ್ನು ನಿವಾರಿಸಲು 'ಖೆಲಾವಂತಿ' ಎಂಬ ಕಾಲ್ಪನಿಕ ವಿವಾಹವನ್ನು ನೆರವೇರಿಸಲಾಗುತ್ತದೆ. ಇಂಥ ಮದುವೆ ಮಾಡಿಕೊಂಡ ಹೆಣ್ಣಿಗೆ ಸಮಾಜ ಕೀಳಾಗಿ ಕಾಣುವುದಲ್ಲದೆ ಯಾವುದೇ ಸಭೆ ಸಮಾರಂಭಗಳಲ್ಲಿ ಸೇರಿಸಿಕೊಳ್ಳಲಾಗುವುದಿಲ್ಲ. ಹಾಗೂ ದೇವತೆಯ ತಿಲಕವನ್ನು ಇಡುವುದಿಲ್ಲ. ಬೇರೆ ಜಾತಿಯವರೊಂದಿಗೆ ಮದುವೆ ಆಗುವುದು ಇವರಲ್ಲಿ ದೊಡ್ಡ ಅಪರಾಧವಾಗಿದೆ. ಹಾಗೇನಾದರೂ ಆದಲ್ಲಿ ಅಂಥವರನ್ನು ಜಾತಿಯಿಂದ ಹೊರ ಹಾಕಲಾಗುತ್ತದೆ.

ಹಕ್ಕಿಪಿಕ್ಕಿಯರು ಹುಟ್ಟು ಮತ್ತು ಸಾವುಗಳನ್ನು ಬಹು ಗಂಭೀರವಾಗಿ ಕಾಣುತ್ತಾರೆ. ಈ ಸಂದರ್ಭದಲ್ಲಿ ಸೂತಕಗಳನ್ನು ಬಹುಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಹೆಣ್ಣಿಗೆ ಹೆರಿಗೆ ಬೇನೆ ಪ್ರಾರಂಭವಾದಂತೆಯೇ ಬಾಣಂತನಕ್ಕಾಗಿ ಮೊದಲೇ ನಿರ್ಮಿಸಲಾದ ಸಣ್ಣ ಗುಡಿಸಲಿಗೆ ಅವಳನ್ನು ಕಳುಹಿಸಿಕೊಡುತ್ತಾರೆ. ಹಕ್ಕಿಪಿಕ್ಕಿ ಹೆಣ್ಣು ತನ್ನ ಹೆರಿಗೆಯನ್ನು ತಾನೇ ಮಾಡಿಕೊಳ್ಳಬೇಕು. ಕೂಸು

ಹಾಗೂ ಬಾಣಂತಿಯನ್ನು ಯಾರೂ ಮುಟ್ಟುವುದಿಲ್ಲ. ಮೈಲಿಗೆಯಾಗುತ್ತದೆಂದು ಇತರ ಸ್ತ್ರೀ ಪುರುಷರಾದರೂ ಅವಳಲ್ಲಿಗೆ ಹೋಗುವುದಿಲ್ಲ. ನಾಗರಿಕ ಸಮಾಜಕ್ಕೆ ಅತೀ ಕ್ರೂರವೆಂದು ಕಂಡುಬರುವ ಈ ಪದ್ಧತಿ ಇಂದಿಗೂ ಅವರಲ್ಲಿ ಆಚರಣೆಯಲ್ಲಿದೆ. ಮಗು ಹುಟ್ಟಿದ ಮೇಲೆ ಹೊಕ್ಕಳುಬಳ್ಳಿಯನ್ನು ಮರದ ತುಂಡು ಇಲ್ಲವೆ ಬಳೆಯ ಚೂರಿನಿಂದ ತಾನೇ ಕೊಯ್ದು ಸೀರೆಯ ನೂಲಿನಿಂದ ಕಟ್ಟುತ್ತಾಳೆ. ತಾನೂ ಸ್ನಾನ ಮಾಡಿ ಮಗುವಿಗೂ ಸ್ನಾನ ಮಾಡಿಸುತ್ತಾಳೆ. ಬೇರೆಯವರು ಅವಳಿಗೆ ಬೆಂಕಿ, ಬೆಲ್ಲದ ಪಾಯಸದ ಗಂಜಿ ಮುಂತಾದವುಗಳನ್ನು ಕೊಡುವುದುಂಟು. ಬಾಣಂತಿಯು ತನ್ನ ಮಗುವನ್ನು ಜೋಳಿಗೆಯಲ್ಲಿ ಕಟ್ಟಿಕೊಂಡು ಊರೆಲ್ಲ ತಿರುಗಿ ಮೂರು ತಿಂಗಳ ಕಾಲ ಭಿಕ್ಷೆ ಮಾಡಿ ಜೀವನ ಸಾಗಿಸುತ್ತಾಳೆ. ಇದು ಹಕ್ಕಿ ಪಿಕ್ಕಿ ಸಮುದಾಯದ  ವಿಶೇಷವಾದ ಜನನ ಸಂಸ್ಕಾರ ಪದ್ಧತಿಯಾಗಿದೆ.

ಬಾಣಂತಿಗೆ ಪೂರ್ವದಲ್ಲಿ ನವಣೆ ಅನ್ನ, ರೊಟ್ಟಿ, ಕೊಡುತ್ತಿದ್ದರು. ಈಗ ರವಾ, ಅನ್ನದ ಗಂಜಿ ಕೊಡುವುದುಂಟು. ಮೂರು ತಿಂಗಳಾದ ಮೇಲೆ ಬಾಣಂತಿಯು ತಾನು ಉಡುತ್ತಿದ್ದ, ತೊಡುತ್ತಿದ್ದ ಎಲ್ಲ ಹಳೆಯ ಬಟ್ಟೆ ಆಭರಣಗಳನ್ನು ಎಸೆದು ಸ್ನಾನ ಮಾಡಿಕೊಂಡು ಹೊಸ ಬಟ್ಟೆ ಆಭರಣಗಳನ್ನು ಧರಿಸುತ್ತಾಳೆ. ಹಿರಿಯರ ಪಾದಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆದು ಅಡಿಗೆ ಮನೆಯನ್ನು ಪ್ರವೇಶ ಮಾಡಿ ಎಲ್ಲರಿಗೂ ಸಿಹಿ ಅಡಿಗೆ ಮಾಡಿ ಉಣಬಡಿಸುತ್ತಾಳೆ. ಅಂದಿಗೆ ಅವಳ ಸೂತಕ ಸಂಪೂರ್ಣವಾಗಿ ಕಳೆದು ಹೋಗುತ್ತದೆ. ಮಗು ಹುಟ್ಟಿದ ಐದು ದಿವಸದಲ್ಲಿ ನಾಮಕರಣ ಶಾಸ್ತ್ರವನ್ನು ಮಾಡುವುದುಂಟು. ನಾಮಕರಣ ದಿವಸವೇ ಕೂಸಿನ ಕೂದಲನ್ನು ತೆಗೆಯುತ್ತಾರೆ. ತೊಟ್ಟಿಲು ಇಡುವ ಸಮಯದಲ್ಲಿ ಮನೆಯನ್ನು ಸಗಣಿಯಿಂದ ಸಾರಿಸುತ್ತಾರೆ. ಮನೆಯ ಹಿರಿಯರು ಬಂದು ಮನೆ ದೇವರುಗಳ ಹೆಸರು ಹೇಳಿ ಪೂಜಿಸಿ ಮಗುವಿಗೆ ಹೆಸರಿಡುತ್ತಾರೆ.

ಋತುಮತಿಯಾದರೆ ಐದು ಅಥವಾ ಏಳು ದಿವಸಗಳವರೆಗೆ ಮನೆಯಲ್ಲಿ ಅವಳು ಏನು ಮುಟ್ಟುವಂತಿಲ್ಲ. ಮನೆಯವರೇ ಆಕೆಗೆ ಎತ್ತಿ ಊಟ ಹಾಕುತ್ತಾರೆ. ಮನೆಯಲ್ಲಿ ಯಾರೂ ಇಲ್ಲದಿದ್ದರೆ ಗಂಡನೇ ಆಕೆಗೆ ಅಡಿಗೆ ಮಾಡಿ ಹಾಕುತ್ತಾನೆ. ಆಕೆಯದೇ ಆದ ಊಟದ ತಾಟು, ಕುಡಿಯುವ ಲೋಟವಿರುತ್ತದೆ.  ಪ್ರತಿದಿನ ಸ್ನಾನ ಮಾಡಲೇಬೇಕು. ಐದನೇಯ ಇಲ್ಲವೆ ಏಳನೇಯ ದಿವಸ ಸ್ನಾನ ಮಾಡಿಸಿ ಹೂವು ಮುಡಿಸಿ, ಮುಖಕ್ಕೆ ಕೆಂಪು ಬಣ್ಣ ಹಚ್ಚುತ್ತಾರೆ. ಅವರಿವರನ್ನು ಕರೆದು ಸಿಹಿ ಊಟ ಬಡಿಸುತ್ತಾರೆ. ಮದುವೆಯ ಸಂದರ್ಭದಲ್ಲಿ ಋತುಮತಿಯಾದರೆ ಮದುವೆಯನ್ನೇ ನಿಲ್ಲಿಸುತ್ತಾರೆ. ಸೂತಕ ಮುಗಿದ ಮೇಲೆ ಮದುವೆ ಮಾಡುತ್ತಾರೆ.

ಹಕ್ಕಿಪಿಕ್ಕಿ ಸಮುದಾಯದಲ್ಲಿ ಯಾರಾದರೂ ತಮ್ಮ ಹಟ್ಟಿಯಲ್ಲಿ ತೀರಿಕೊಂಡರೆ ಸತ್ತವನ ಸಂಬಂಧಿಕರನ್ನುಳಿದು ಇತರರು ತಮ್ಮ ಗುಡಿಸಲುಗಳನ್ನು ಖಾಲಿಮಾಡಿಕೊಂಡು ಬೇರೆ ಪ್ರದೇಶಗಳಿಗೆ ವಲಸೆ ಹೋಗಿಬಿಡುತ್ತಾರೆ. ಸಾವಿಗೆ ಅವರ ದಾದಾಜಿ ದೇವರು ಮತ್ತು ಅಗೋಚರವಾದ

ಅಸಾಮಾನ್ಯ ಶಕ್ತಿ ಕಾರಣವೆಂದು ನಂಬಿರುವುದುಂಟು. ಸತ್ತನಂತರ ಹೆಣಕ್ಕೆ ಸ್ನಾನ ಮಾಡಿಸಿ ಹೊಸಬಟ್ಟೆ ಹೊದಿಸಿ ಚಟ್ಟವನ್ನು ಹೊತ್ತುಕೊಂಡು ಹೋಗಿ ಹೂಳುತ್ತಾರೆ. ಯಾರ ಮನೆಯಲ್ಲಿ ಸತ್ತಿರುತ್ತಾರೋ ಅದೇ ಬೆಡಗಿನವರು ಮೊದಲಿಗೆ ಹೆಣ ಎತ್ತಿಕೊಳ್ಳುತ್ತಾರೆ. ಮನೆಬಿಟ್ಟು ಸ್ವಲ್ಪ ದೂರ ಹೋದ ಮೇಲೆ ಬೇರೆ ಬೆಡಗಿನವರು ಹೊರಬಹುದು. ಚಟ್ಟಕ್ಕಾಗಿ ಮೊದಲು ಕಳ್ಳಿ ಕಟ್ಟಿಗೆ ಬಳಸುತ್ತಿದ್ದರು. ಈಗ ಕಳ್ಳಿಕಟ್ಟಿಗೆ ದೊರೆಯದ ಕಾರಣ ಬಿದಿರುಗಳನ್ನು ಉಪಯೋಗಿಸುತ್ತಿದ್ದಾರೆ.

ಹಕ್ಕಿ ಪಿಕ್ಕಿ ಸಮುದಾಯದವರು ತಮ್ಮದೇಯಾದ ಭಾಷೆಯನ್ನು ಮಾತನಾಡುತ್ತಾರೆ. ಅವರು ಮಾತನಾಡುವ ಭಾಷೆಯನ್ನು ವಾಗ್ರಿ ಎಂದು ಕರೆಯಲಾಗುತ್ತದೆ. ಇದು ಗುಜರಾತಿ, ಮೆವಾರಿ ಮತ್ತು ರಾಜಸ್ತಾನಿ ಭಾಷೆಗಳ ಮಿಶ್ರಣವಾಗಿದೆ. ಇವರು ತಮ್ಮ ತಮ್ಮಲ್ಲೆ ಮಾತನಾಡುವಾಗ ತಮ್ಮ ಮಾತೃಭಾಷೆಯನ್ನು ಮಾತನಾಡುತ್ತಾರೆ. ಇತರರೊಂದಿಗೆ ಮಾತನಾಡುವಾಗ ಕನ್ನಡ ಅಥವಾ ಇತರೆ ಭಾಷೆಯಲ್ಲಿ ಮಾತನಾಡುತ್ತಾರೆ. ಬಹುತೇಕ ಹಕ್ಕಿ–ಪಿಕ್ಕಿ ಬುಡಕಟ್ಟಿನವರು ಒಂದಕ್ಕಿಂತ ಹೆಚ್ಚು ಭಾಷೆಯನ್ನು ಮಾತನಾಡುತ್ತಾರೆ.

ಹಕ್ಕಿಪಿಕ್ಕಿ ಬುಡಕಟ್ಟು ಸಮುದಾಯದವರು ಧಾರ್ಮಿಕ ನಂಬಿಕೆಯ ಹಿನ್ನಲೆಯಲ್ಲಿ ಹಚ್ಚೆ ಹಾಕಿಸಿಕೊಳ್ಳುತ್ತಾರೆ. ಕೆಲವರಿಗೆ ಹಾವು, ಚೇಳುಗಳು ಹೆಚ್ಚು ಕಾಣಿಸುತ್ತಿದ್ದರೆ ಅವುಗಳ ಚಿತ್ರದ ಹಚ್ಚೆಯನ್ನು ತಮ್ಮ ಕೈ ರಟ್ಟೆಗಳ ಮೇಲೆ ಹಾಕಿಸಿಕೊಳ್ಳುತ್ತಾರೆ. ಹನುಮಂತರಾಯ ದೇವರ ಚಿತ್ರವನ್ನು ಮೈಮೇಲೆ ಹಾಕಿಸಿಕೊಳ್ಳುವುದರಿಂದ ಹೆದರಿಕೆಯುಂಟಾಗುವುದಿಲ್ಲವೆಂಬ ನಂಬಿಕೆ ಇವರಲ್ಲಿದೆ. ಹೆಂಗಸರು, ಗಂಡಸರು ಎಂಬ ಭೇದಭಾವವಿಲ್ಲದೆ ಹಚ್ಚೆ ಹಾಕಿಸಿಕೊಳ್ಳುವುದುಂಟು. ಹಚ್ಚೆಗಳು ಸ್ವರ್ಗಕ್ಕೆ ಬಾಗಿಲು ಮತ್ತು ಅವು ತಮ್ಮೊಂದಿಗೆ ಬರುವ ಶಾಶ್ವತ ಸಂಪತ್ತೆಂಬ ಭಾವನೆ ಇವರಲ್ಲಿದೆ.

ಹಕ್ಕಿಪಿಕ್ಕಿಯರು ಕಟ್ಟುಮಸ್ತಾದ ಶರೀರವನ್ನು ಹೊಂದಿರುವ ಜನ, ಇತರೆ ಸಮುದಾಯದ ಜನರನ್ನು ಸಂಶಯದಿಂದ ಕಾಣುವುದರಿಂದ ಬೇರೆಯವರಿಗೆ ಇವರು ಹೆದರುವುದುಂಟು. ಬೇರೆಯವರು ಇವರನ್ನು ಅನುಮಾನದಿಂದ ನೋಡುವುದರಿಂದ ಇವರು ಕೂಡ ಹೊರಗಿನವರನ್ನು ಅಷ್ಟು ಸುಲಭವಾಗಿ ನಂಬುವುದಿಲ್ಲ. ನಂಬಿದರೆ ಪ್ರಾಣವನ್ನೆ ಕೊಡುವಷ್ಟು ವಿಶ್ವಾಸ ಹೊಂದಿರುವವರು. ಬೇರೆಯವರೊಂದಿಗೆ ಸಾಕಷ್ಟು ಸೌಜನ್ಯದಿಂದ ವರ್ತಿಸುತ್ತಾರೆ. ಸಾಮಾನ್ಯವಾಗಿ ಇವರಲ್ಲಿ ಯಾರೂ ಸುಮ್ಮನೆ ಕುಳಿತುಕೊಳ್ಳುವುದಿಲ್ಲ, ಏನಾದರೂ ಒಂದು ಕೆಲಸವನ್ನು ಮಾಡುತ್ತಲೇ ಇರುತ್ತಾರೆ. ಇವರ ಒಳಾಡಳಿತ ಪದ್ಧತಿ ಆಧುನಿಕ ಪಂಚಾಯಿತಿ ಪದ್ಧತಿಗೆ ಮಾದರಿಯನ್ನು ಒದಗಿಸುವಂತಿದೆ.

ಸಮಾನತೆ ಅರ್ಥವನ್ನು ಕಂಡುಕೊಂಡಿರುವುದು ಈ ಸಮುದಾಯದಲ್ಲಿಯೇ. ಗಂಡ ಹೆಂಡತಿಯನ್ನು ಕೀಳಾಗಿ ಕಾಣುವುದಾಗಲೀ, ಮಕ್ಕಳನ್ನು ಹೆದರಿಸುವುದು ಬೆದರಿಸುವುದಾಗಲಿ ಇವರಲ್ಲಿ ಇಲ್ಲ. ಎಲ್ಲರಿಗೂ ಸ್ವಾತಂತ್ರ್ಯವಿದ್ದು ಪರಸ್ಪರರು ಸಮಾನ ಮನೋಭಾವನೆಯಿಂದ

ಕಾಣುತ್ತಾರೆ. ಹಕ್ಕಿಪಿಕ್ಕಿಯರು ಸ್ವಾಭಿಮಾನಕ್ಕೆ ಹೆಸರಾದ ಜನ. ಹೆಣ್ಣು ಮಕ್ಕಳು ಭಿಕ್ಷೆ ಬೇಡುತ್ತಾರಾದರು ಸ್ವಾವಲಂಬಿಗಳಾಗಿ ಬದುಕುವುದನ್ನೇ ಇಷ್ಟಪಡುತ್ತಾರೆ.

ಹಕ್ಕಿಪಿಕ್ಕಿಯರಲ್ಲಿ ಹೆಣ್ಣನ್ನು ತನ್ನ ಜೊತೆಯಲ್ಲಿಯೇ ಉಳಿಸಿಕೊಳ್ಳುವುದಕ್ಕಾಗಿ ಗಂಡಸು ತನ್ನ ಅತ್ತೆ ಮಾವಂದಿರಿಗೆ ಖರ್ಚು ಮಾಡುವುದು, ಬಗ್ಗಿ ತಗ್ಗಿ ಇರುವುದು, ಬಾಲ್ಯವಿವಾಹ ಪದ್ಧತಿ ಹಾಗೂ ಸಂಚಾರಿ ಬದುಕು ಬೇಟೆಯ ಹಿನ್ನೆಲೆಯಲ್ಲಿ ಬಂದಿರುವಂತಹುದು. ಗಂಡಸರು ಹೆಚ್ಚು ಸಾರಾಯಿ ಕುಡಿಯುವುದುಂಟು.ಹೆಂಗಸರು ಕುಡಿಯುತ್ತಾರೆ. ಗಂಡಸರು ಹೆಚ್ಚು ಸಮಾಧಾನ ಚಿತ್ತರು. ಹೆಣ್ಣುಮಕ್ಕಳೆ ಹೆಚ್ಚು ಮುಂಗೋಪಿಗಳಾಗಿದ್ದು ಜಗಳಗಳಿಗೆ ಕಾರಣರಾಗುತ್ತಾರೆ.

ಹಕ್ಕಿಪಿಕ್ಕಿಯರಲ್ಲಿ ಶಿಥಿಲ ಕೌಟುಂಬಿಕ ವ್ಯವಸ್ಥೆ ಕಂಡರು ಹೆಚ್ಚು ಸಂಕೀರ್ಣತೆಯಿಂದ ಕೂಡಿರುವಂತಹುದು. ಅನೈತಿಕ ವ್ಯವಹಾರದ ಬಗೆಗೆ ಹೆಚ್ಚು ಕಟ್ಟುನಿಟ್ಟಾದ ಕ್ರಮಗಳನ್ನು ಅನುಸರಿಸುತ್ತಾರೆ. ಹೆಂಡತಿಯು ತನ್ನ ಗಂಡನು ಬೇರೆ ಹೆಣ್ಣುಗಳ ಜೊತೆಗೆ ಸಂಬಂಧ ಬೆಳೆಸುವುದನ್ನು ಸಹಿಸುವುದಿಲ್ಲ. ಗಂಡಸು ತಪ್ಪು ಮಾಡಿದರೆ ಅದನ್ನು ಕೇಳಿ ಸರಿಪಡಿಸುತ್ತಾಳೆ. ಉಳಿದ ಸಮುದಾಯಗಳ ಹೆಣ್ಣುಮಕ್ಕಳಿಗಿಂತಲೂ ಹಕ್ಕಿಪಿಕ್ಕಿ ಹೆಂಗಸರು ಹೆಚ್ಚು ಗಟ್ಟಿಗರು. ಹಕ್ಕಿಪಿಕ್ಕಿಯರು ಸುಳ್ಳು ಹೇಳುವುದಿಲ್ಲ. ಅಪ್ಪಿತಪ್ಪಿ ವ್ಯಾಪಾರದ ಸಂದರ್ಭದಲ್ಲಿ ಹೇಳುತ್ತಾರೆ. ಕೆಲವೊಮ್ಮೆ ತಾವೇ ಮೋಸ ಹೋಗುವುದುಂಟು. ಊರುಗಳಲ್ಲಿ ಶತ್ರುವೇ ಆಗಿದ್ದರು ವ್ಯವಹಾರಕ್ಕೆ ಹೋದಾಗ ಅದನ್ನು ಮರೆತು ಸ್ನೇಹಿತರಾಗಿ ಬಿಡುತ್ತಾರೆ.

**ಪರಾಮರ್ಶನ ಗ್ರಂಥಗಳು**


- Deepak S., Jagadeesh1 and Sindhu, M. Gowda (2017). Analysis of Socio Economic Profile Of Hakki- Pikki Tribes Of Karnataka, International Journal of Science, Environment, V-6 (4), Pp 2475 – 2481
- Dakshayani B, Gangadhar MR. (2016). Socio-demographic and living conditions of tribes of Mysore district, Karnataka. Asian Mirror-International journal of research. 3(1). 71-80.
- Mann R.S. (1980). Hakkipikkis trappers and seller. Anthropological survey of India, Kolkata.